ದಿಃ 12.02.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟಿ ಸವಾಲುಃ ಶ್ರೀ ಸಿ.ವಿ.ಕೆ., ವಕೀಲರಿಂದ ಪ್ರತಿವಾದಿ ಪರವಾಗಿಃ

2. ನನ್ನ ಪ್ರಮಾಣ ಪತ್ರದ ಪ್ಯಾರಾ ನಂಃ9 ರಲ್ಲಿ ಕಾವೇರಿ ನಗರದಲ್ಲಿ ಸ್ವತ್ತಿನ ಹಾಲಿ ಮಾರುಕಟ್ಟೆ ದರವು ರೂ.2,350/- ಚದರ ಅಡಿಗೆ ಎಂದು ಹೇಳಿರುತ್ತೇನೆ. ಈ ಬಗ್ಗೆ ನಾನು ಇಲ್ಲಿ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಸದರಿ ಸ್ವತ್ತಿನ ಮಾರುಕಟ್ಟೆ ದರವು ರೂ.6,000/- ರಿಂದ 12,000/- ಚದರ ಅಡಿಗೆ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮನೆಯ ಮಾರುಕಟ್ಟೆ ದರ ಅಂದಾಜು ರೂ.25 ಲಕ್ಷ ಇರುತ್ತದೆ. ಇದರ ಮಾರುಕಟ್ಟೆ ದರವು ಈಗ ರೂ.60 ರಿಂದ 70 ಲಕ್ಷ ಇರುತ್ತದೆ ಎಂದರೆ ಸರಿಯಲ್ಲ. ನಾನು ಬೇಕಂತಲೇ ಮಾರಕಟ್ಟೆ ದರವನ್ನು ಕಡಿಮೆ ತೋರಿಸಿ, ನ್ಯಾಯಾಲಯದ ಶುಲ್ಕ ಕಡಿಮೆ ಕಟ್ಟಿರುತ್ತೇನೆ ಎಂದರೆ ಸರಿಯಲ್ಲ. ಉಪನೋಂದಣಾಧಿಕಾರಿ ಕಚೇರಿಯಿಂದ ಮಾರುಕಟ್ಟೆ ದರದ ಬಗ್ಗೆ ಸೂಕ್ತ ದಾಖಲಾತಿಗಳನ್ನು ತಂದು ಇಲ್ಲಿ ಹಾಜರುಪಡಿಸಲು ನನಗೇನು ತೊಂದರೆ ಇಲ್ಲ ಎಂದರೆ ಸರಿ. ಈ ಬಗ್ಗೆ ಬೇಕಂತಲೇ ನಾನು ಇಲ್ಲಿ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಕೇ. ಹೇ. ಸರಿ ಇದೆ

(ಎಂ. ಚಂದ್ರಶೇಖರ್ ರೆಡ್ಡಿ)
ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
(ಸಿಸಿಹೆಚ್ - 01) ಬೆಂಗಳೂರು.